Bangalore City Civil Court Bill 1979

INTRODUCTION

SRI L. G. HAVANUR (Minister for Law, Social Welfare and Backward Classes).—Sir, I move :

"That leave be granted to introduce the Bangalore City Civil Court Bill, 1979."

MR. SPEAKER.—Motion moved. I will put it to the vote of the House. The question is :

"That leave be granted to introudce the Bangalore City Civil Court Bill 1979.

The motion was adopted and leave was granted

SRI L G. HAVANUR.—Sir, I introduce the Bangalore City Civil Courts Bill, 1979

MR. SPEAKER,—Bill introduced. * *

Budget Estimates for 1979-80.—Demands for Grants

Demand Nos. 1, 2, 3 and 33 (Debate Continued)

† ಶ್ರೀ ಕೆ. ಹೆಚ್. ರಂಗನಾಥ್ (ಕೃಷಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):— ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ಮತ್ತು ಶುಕ್ರವಾರದಿಂದ ಈ ಸದನದ ಮಾನ್ಯ ಸದಸ್ಯರುಗಳು ಅದರಲ್ಲಿಯೂ ಕೂಡ ವ್ಯವಸಾಯದಲ್ಲಿ ಆಸಕ್ತಿಯುಳ್ಳ ಸದಸ್ಯರುಗಳು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಟಿ. ಆರ್. ಶಾಮಣ್ಣನವರು ಅವರು ಇಲ್ಲಿ ಇಲ್ಲ ; ಅವರು, ಈ ಬೇಡಿಕೆಯ ಬಗ್ಗೆ ಕಟ್‌ಮೋಷನ್‌ಗಳನ್ನು ಕಳುಹಿಸಿ ತಮ್ಮ ಮೂಲಕ ಕೆಲವು ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ಬಹಳ ಮಟ್ಟಿಗೆ ವಿರೋಧಿ ಸದಸ್ಯರುಗಳು ಈ ವಿಚಾರಗಳನ್ನೇ ದೃಷ್ಟಿಯಲ್ಲಿಟ್ಟುಕೊಂಡು ಪ್ರಸ್ತಾಪ ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದೆಂದು ನಾನಾದರೂ ಭಾವಿಸುತ್ತೇನೆ. ಇವತ್ತು ಭಾಷಣವನ್ನು ಪ್ರಾರಂಭಮಾಡಿದಂತಹ ಮಾನ್ಯ ವೈ. ರಾಮಕೃಷ್ಣ ಅವರು ಕೆಲವಾರು ಮಾತುಗಳನ್ನು ಆಡಿದ್ದಾರೆ. ವ್ಯವಸಾಯದ ಕ್ರಮದಲ್ಲಿ ಸರ್ಕಾರ ವಿಮುಖವಾಗಿದೆ, ಈ ಕೃಷಿ ಇಲಾಖೆಯಲ್ಲಿ ಜಡತ್ವ ಇದೆ, ಈ ಇಲಾಖೆ ಹೊಣೆಗಾರಿಕೆಯಿಂದ ಕೆಲಸ ಮಾಡುತ್ತಿಲ್ಲ, ಈ ಇಲಾಖೆಯಲ್ಲಿ ಉತ್ಸಾಹ ಇಲ್ಲ ಹಾಗೆ ಅಂತ ಹೇಳುತ್ತಾ, ಮತ್ತೆ ಉತ್ಪಾದನೆ ಕಡಿಮೆಯಾಗಿದೆ ಎಂದು ಹೇಳುವ ಮಟ್ಟಿಗೂ ಕೂಡ ಅವರು ಹೋದರು. ವ್ಯವಸಾಯದಲ್ಲಿ ಉತ್ಪಾದನೆಯು ಮಟ್ಟ ಯಾವ ದಾರಿಯಲ್ಲಿದೆಯೆಂಬುದು ಮಾನ್ಯ ಸದಸ್ಯರುಗಳಿಗೆ ಒದಗಿಸಿರತಕ್ಕ ಒಂದು ಸಣ್ಣ ವರದಿ ಏನಿದೆ ಅದನ್ನು ನೋಡಿದರೆ ಗೊತ್ತಾಗುತ್ತದೆ. ನಾನು ವರದಿಯಲ್ಲಿರತಕ್ಕ ಅಂಕಿ ಅಂಶಗಳನ್ನು ಹೇಳುತ್ತಾ, ಈ ಸದನದ ಸಮಯವನ್ನು ಹೆಚ್ಚು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ೧೯೫೬-೫೭ ರಿಂದ ೧೯೭೮-೧೯೭೯ರ ವರೆಗಿನ ಅಂಕಿಅಂಶಗಳನ್ನು ತಾವು ನೋಡುವುದಾದರೆ ನಾವು ಪ್ರಗತಿಯ ಹಾದಿಯಲ್ಲಿದ್ದೇವೆಂಬುದನ್ನು ಈ ಅಂಕಿಅಂಶಗಳು ತೋರಿಸಿಕೊಡುತ್ತಿವೆ. ಆದ್ದರಿಂದ, ಜಡತ್ವದ ಪ್ರಶ್ನೆಯಾಗಲೀ ಹೊಣೆಗಾರಿಕೆಯಿಲ್ಲದೇ ಇರತಕ್ಕ ಪ್ರಶ್ನೆಯಾಗಲೀ, ಇಲಾಖೆ ಅಧಿಕಾರಿಗಳಲ್ಲಿ ಉತ್ಸಾಹ ಇಲ್ಲದೇ ಇರತಕ್ಕ ಪ್ರಶ್ನೆಯಾಗಲೀ ಉದ್ಭವಿಸುವುದಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸಕಾರಣ ಇಲ್ಲ ಎನ್ನುವ ಮಾತನ್ನು ನಾನಾದರೂ ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿಲೆ ಎಕರೆವಾರು ಇಳುವರಿ ಕೂಡ ಉತ್ಪಾದನೆ ಜಾಸ್ತಿಯಾಗಿದೆ. ಉತ್ಪಾದನೆ ಜಾಸ್ತಿಯಾಗುವಾಗ, ಬೇರೆ

---

* * Bill appended as Annexure of this volume.